**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸವಣೂರು.</u>**

ಸಿಸಿ ಸಂಖ್ಯೆಃ 519/2023

ಪಿಡಬ್ಲ್ಯೂಃ 04 ಸಿಡಬ್ಲ್ಯೂ : 04
ದಿನಾಂಕಃ 05-01-2026
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ನನ್ನೆಸಾಬ ಕಿಲ್ಲೇದಾರ |
| ತಂದೆ ಹೆಸರು | - ಕಾಲೇಸಾಬ |
| ವಯಸ್ಸು | - 59 ವರ್ಷಗಳು |
| ಉದ್ಯೋಗ | - ಅಬಕಾರಿ ಉಪ ನೀರಿಕ್ಷಕರು -1 ಹಿರೆಕೇರೂರ ಅಬಕಾರಿ ವಲಯ |
| ವಾಸ ಸ್ಥಳ | - ಹಿರೆಕೇರೂರ |

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದ.</u>**

ನಾನು 2005 ರಿಂದ 2024 ರ ವರಗೆ ಸವಣೂರು ಅಬಕಾರಿ ವಲಯದಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 31-03-2023 ರಂದು ವಿಧನಸಭಾ ಚುನಾವಣಾ ನಿಮಿತ್ತ ನೀತಿ ಸಂಹಿತೆ ಜಾರಿಯಲ್ಲಿದ್ದು ಚಾಸಾ- 1 ರವರಿಗೆ ಬಾತ್ಮಿ ಬಂದ ಮೇರೆಗೆ ಚಾಸಾ- 1 ರವರೊಂದಿಗೆ ನಾನು ಮತ್ತು ಚಾಸಾ- 5 ಮತ್ತು 6 ರವರು ಕೂಡಿಕೊಂಡು ವಾಹನ ಸಂಖ್ಯೆ ಕೆಎ- 27 ಜಿ 0432 ರಲ್ಲಿ ಕುಳಿತುಕೊಂಡು ಸವಣೂರ ಬಸ್ಟ್ಯಾಂಡ್ ಹತ್ತಿರ ಹೋಗಿ ಇಬ್ಬರು ವ್ಯಕ್ತಿಗಳನ್ನು ಕರೆದು ನಮ್ಮ ಪರಿಚಯ ಮಾಡಿಕೊಂಡು ಪಂಚರಾಗಲು ಕೋರಿಕೊಂಡ ಮೇರೆಗೆ ಅವರು ಪಂಚರಾಗಿ ಬರಲು ಒಪ್ಪಿರುತ್ತಾರೆ. ನಂತರ ಅವರನ್ನು ನಮ್ಮ ವಾಹನದಲ್ಲಿ ಹತ್ತಿಸಿಕೊಂಡು ಅಲ್ಲಿಪೂರ, ಯಲವಿಗಿ ಮತ್ತು ಪರಮವಾಡಿ ಮಾರ್ಗವಾಗಿ ಹೂವಿನಶಿಗ್ಲಿ ಗ್ರಾಮಕ್ಕೆ ಹೋದೆವು. ಅಲ್ಲಿ ಸಾರ್ವಜನಿಕರಲ್ಲಿ ರಾಮಪ್ಪ ಯಲ್ಲಪ್ಪ ಬಂಡಿ ರವರ ಕಿರಾಣಿ ಅಂಗಡಿ ಎಲ್ಲಿ ಎಂದು ಕೇಳಲಾಗಿ ಅವರು ಅಂಗಡಿಯನ್ನು ತೋರಿಸಿರುತ್ತಾರೆ. ಅಂಗಡಿಯಲ್ಲಿ ಒಬ್ಬ ವ್ಯಕ್ತಿಯು ಇದ್ದನು. ಅವನ ಹೆಸರು ಕೆಳಲಾಗಿ ಅವನ ಹೆಸರು ರಾಮಪ್ಪ ಯಲ್ಲಪ್ಪ ಬಂಡಿ ಎಂದು ನುಡಿದನು. ಬಾತ್ಮಿ ಬಂದ ವಿಷಯವನ್ನು ಅವನಿಗೆ ತಿಳಿಸಿದೆವು. ಅವನು ಯಾವುದೇ ಅಕ್ರಮ ಮದ್ಯ ತನ್ನ ಬಳಿ ಇಲ್ಲ ಎಂದು ಹೇಳಿದನು. ಸ್ಥಳದಲ್ಲಿಯೇ ಚಾಸಾ-1 ರವರು ಶೋಧನಾ ಸಮುಚ್ಚಿತ ವರದಿಯನ್ನು ತಯಾರಿಸಿರುತ್ತಾರೆ. ನಂತರ ಅಂಗಡಿಯನ್ನು ಪಂಚರೊಂದಿಗೆ ಪ್ರವೇಶಿಸಿದೆವು. ಅಂಗಡಿಯ ಹಣದ ಕೌಂಟರ ಕೆಳಗಡೆ ಎರಡು ರಟ್ಟಿನ ಪೆಟ್ಟಿಗೆಗಳು ಕಂಡು ಬಂದವು. ಅವುಗಳನ್ನು

ಪರಿಶೀಲಿಸಿದಾಗ ಅದರಲ್ಲಿ 32 X 180 ಎಂ ಎಲ್ ಓಲ್ಡ ಟೆಂವರಿಂಗ್ ವಿಸ್ಕಿಯ ಮದ್ಯ ತುಂಬಿದ ಟೆಟ್ರಾ ಪ್ಯಾಕಗಳು, 135 X 90 ಎಂ ಎಲ್ ನ ಓರಿಜನಲ್ ಚಾಯ್ಸ ವಿಸ್ಕಿಯ ಮದ್ಯ ತುಂಬಿದ ಟೆಟ್ರಾ ಪ್ಯಾಕಗಳು ಕಂಡು ಬಂದವು ಮತ್ತು ಮದ್ಯವನ್ನು ಅಳತೆ ಮಾಡುವ ಒಂದು ಅಳತೆ ಮಾಪನ ಸಿಕ್ಕಿರುತ್ತದೆ. ಆರೋಪಿಗೆ ಮದ್ಯವನ್ನು ಸಂಗ್ರಹಿಸಿಟ್ಟು ಕೊಳ್ಳಲು ಯಾವುದಾದರೂ ಪಾಸ್ ಅಥವಾ ಪರಿಮಿಟ್ ಇದೆಯಾ ಎಂದು ಕೇಳಲಾಗಿ ಅವನು ಇಲ್ಲ ಎಂದು ಹೇಳಿರುತ್ತಾನೆ. ಮದ್ಯವನ್ನು ಅಕ್ರಮವಾಗಿ ಸಂಗ್ರಹಿಸಿ ಮಾರಾಟ ಮಾಡುವುದು ಅಪರಾಧ ಎಂದು ಪಂಚರಿಗೆ ತಿಳಿಸಿ ದೂರನ್ನು ದಾಖಲಿಸುತ್ತೇವೆ ಎಂದು ನುಡಿದಿರುತ್ತಾರೆ.

ನಂತರ 13 X 180 ಎಂ ಎಲ್ ಓಲ್ಡ ಟೆಂವರಿಂಗ್ ವಿಸ್ಕಿಯ ಮದ್ಯ ತುಂಬಿದ ಟೆಟ್ರಾ ಪ್ಯಾಕಗಳು ಮತ್ತು 26 X 90 ಎಂ ಎಲ್ ನ ಓರಿಜನಲ್ ಚಾಯ್ಸ ವಿಸ್ಕಿಯ ಮದ್ಯ ತುಂಬಿದ ಟೆಟ್ರಾ ಪ್ಯಾಕಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಒಂದು ರಟ್ಟಿನ ಪೆಟ್ಟಿಗೆಯಲ್ಲಿ ಹಾಕಿ, ಬಿಳಿ ಬಟ್ಟೆಯಿಂದ ಸುತ್ತಿ, ದಾರದಿಂದ ಕಟ್ಟಿ, ಪಂಚರ ಮತ್ತು ಅಧಿಕಾರಿಗಳ ಸಹಿವುಳ್ಳ ಚೀಟಿಗಳನ್ನು ಅದಕ್ಕೆ ಅಂಟಿಸಿರುತ್ತೇವೆ. ನಂತರ ಸದರಿ ಪೆಟ್ಟಿಗೆಯನ್ನು ಇಲಾಖಾ ಮೊಹರಿನಿಂದ ಶೀಲ್ ಮಾಡಿರುತ್ತೇವೆ. ನಂತರ ಚಾಸಾ-1 ರವರು ಪಂಚರ ಸಮಕ್ಷಮ ಪಂಚನಾಮೆ ಬರೆದಿರುತ್ತಾರೆ. ಸದರಿ ಪಂಚನಾಮೆಯನ್ನು ಮುಂಜಾನೆ 08.00 ರಿಂದ 9.00 ವರೆಗೆ ನಡೆದಿರುತ್ತದೆ. ನಂತರ ಮಾದರಿನಮೂನೆಯ ಮೇಲೆ ಪಂಚರ ಸಹಿಯನ್ನು ಪಡೆದಿರುತ್ತೇವೆ. ಪ್ರಕರಣಕ್ಕೆ ಸಂಬಂಧಪಟ್ಟ ಮುದ್ದೆಮಾಲು, ಪಂಚನಾಮೆ ತೆಗೆದುಕೊಂಡು ಕಚೇರಿಗೆ ಮರಳಿ ಬಂದಿರುತ್ತೇವೆ. ಪ್ರಕರಣದ ಕುರಿತು ಚಾಸಾ-1 ರವರು ಪಿರ್ಯಾದಿ ಸಲ್ಲಿಸಿರುತ್ತಾರೆ. ಆರೋಪಿಗೆ ನೋಟಿಸ ನೀಡಿರುತ್ತೇವೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದು ಅದು ಸ್ಥಳ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ- 1 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು 1(ಡಿ) ಎಂದು ಗುರುತಿಸಲಾಯಿತು.

ಆ ದಿನ ಜಪ್ತಪಡಿಸಿಕೊಂಡ ಮುದ್ದೆಮಾಲುಗಳನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಅವುಗಳನ್ನು ಈಗಾಗಲೇ ಮು.ಮಾ-1 ರಿಂದ 3 ಎಂದು ಗುರುತಿಸಲಾಗಿದೆ. ಈ ಕುರಿತು ಹೇಳಿಕೆಯನ್ನು ನೀಡಿರುತ್ತೇನೆ. ನ್ಯಾಯಾಲಯದಲ್ಲಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಮ್ ಎಸ್ ಎಮ್ ಎಚ್ ವಕೀಲರಿಂದ</u>

ಬಾತ್ಮಿ ಎಷ್ಟು ಗಂಟೆಗೆ ಚಾಸಾ- 1 ರವರಿಗೆ ಬಂದಿರುತ್ತದೆ ಎಂದು ಅದು ಅವರಿಗೆ ಗೊತ್ತಿರುತ್ತದೆ. ನಿಮ್ಮ ಮೇಲಾಧಿಕಾರಿಗಳು ನಿಮ್ಮನ್ನು ಕರೆದಾಗ ಸಮಯ ಎಷ್ಟಾಗಿತ್ತು ಎಂದರೆ ಮುಂಜಾನೆ 7.15 ಆಗಿತ್ತು. ನಿಪಿ- 1 ರಲ್ಲಿ ನೀವು 7.00 ಗಂಟೆಗೆ ಸವಣೂರ ಬಸ್ಸ ಸ್ಟಾಂಡ ಬಳಿ ಇದ್ದೀರಿ ಎಂದು ನಮೂದು ಮಾಡಿದ್ದಾರೆ ಎಂದರೆ ಸರಿ. ಸವಯ ವ್ಯತ್ಯಾಸ ನೋಡಿದರೆ ನೀವು ಸ್ಥಾನಿಕವಾಗಿ ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದ ಚಕ್ಕಬಂದಿ

ಹೇಳಲು ಆಗುತ್ತದೆಯಾ ಎಂದರೆ ಬರುತ್ತದೆ ಅದನ್ನು ನುಡಿದಿರುತ್ತಾರೆ. ಆರೋಪಿಗೆ ಸಂಬಂಧಪಟ್ಟಂತೆ ಯಾವುದೇ ಕಿರಾಣಿ ಅಂಗಡಿ ಇಲ್ಲ ಎಂದರೆ ಸರಿಯಲ್ಲ. ಈ ರೀತಿಯ ಮುದ್ದೆಮಾಲುಗಳು ಸಾಕಷ್ಟು ಸಿಗುತ್ತವೆ ಎಂದರೆ ಆರೋಪಿಯ ಅಂಗಡಿಯಿಂದ ಸಿಕ್ಕಿರುತ್ತವೆ. ಆರೋಪಿಯಿಂದ ಆ ದಿನ ಯಾವುದೇ ಮುದ್ದೆಮಾಲುಗಳನ್ನು ಜಪ್ತಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಅಂಕಿ ಅಂಶಗಳ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿ ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಯಾವುದೇ ಪಂಚನಾಮೆಯಲ್ಲಿ ಹಾಜರು ಇಲ್ಲದೇ ಇದ್ದರು ಸುಳ್ಳು ಹೇಳಿಕೆ ನೀಡಿರುತ್ತೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.